ದಿನಾಂಕ: 05–07–2004ರ ಸರ್ಕಾರದ ಆದೇಶ ಸಂಖ್ಯೆ: ಎಫ್‌ಡಿ 2 ಬಿಇಎಂ 2003 ಮಿತವ್ಯಯಕ್ಕೆ ಸಂಬಂಧಿಸಿದ ಆದೇಶದ ಅನ್ವಯ ಇತರೆ ಅಂಶಗಳ ಜೊತೆಗೆ ಈ ಕೆಳಕಂಡಂತೆ ಸೂಚಿಸಲಾಗಿದೆ:

> " (g) The ban on creation and filling up of posts both under plan and non-plan through direct recruitment continues. All promotions, recruitment and post creation ofany kind would require prior concurrence of Finance Department. Proposals for creation of posts, recruitment, and promotions will not be considered unless the proportion of vacant posts as indicated in D.P.A.R.'s U.O. Note No: ಸಿಅಸುಇ 02 ಈಕಾಅ 2004, ದಿನಾಂಕ: 01–03–2004, is abolished.
>
> (h) Theban on recruitment / creation and filling up of posts also covers all Grant-inAid Institution.
>
> (i) All the existing vacant posts or those falling vacant under Grnat-in-Aid Institutions should remain vacant without exception until further orders".

ಅದರನ್ವಯ ಖಾಲಿ ಹುದ್ದೆಗಳನ್ನು ತುಂಬಲು ಅನುಮತಿ ನೀಡಲು ಅವಕಾಶವಿರುವುದಿಲ್ಲ. ಈ ನಿಷೇಧವನ್ನು ಸಡಿಲಿಸಿ, ಅನುದಾನಿತ ಖಾಸಗಿ ಪ್ರೌಢಶಾಲೆಗಳಲ್ಲಿನ 2106 ಮತ್ತು ಅನುದಾನಿತ ಖಾಸಗಿ ಪದವಿ ಪೂರ್ವ ಕಾಲೇಜುಗಳಲ್ಲಿನ 282 [ಒಟ್ಟು 2388] ಬೋಧಕ ಹುದ್ದೆಗಳನ್ನು ತುಂಬಲು ಆರ್ಥಿಕ ಮಿತವ್ಯಯ ಸಡಿಲಿಸಿ, ಸದ್ಯದಲ್ಲೆ ಆದೇಶವನ್ನು ಹೊರಡಿಸಲಾಗುವುದು.

ಈ) ಮೇಲೆ ಉಲ್ಲೇಖಿಸಿರುವ ಬೋಧಕ ಹುದ್ದೆಗಳನ್ನು ತುಂಬಲು ಅನುಮತಿ ನೀಡಿ ಸದ್ಯದಲ್ಲೇ ಸರ್ಕಾರಿ ಆದೇಶವನ್ನು ಹೊರಡಿಸಲಾಗುವುದು. ಬೋಧಕೇತರ ಹುದ್ದೆಗಳನ್ನು ತುಂಬಲು ಆರ್ಥಿಕ ಮಿತವ್ಯಯ ಮುಂದುವರೆದಿದೆ.

62 (13) ಶ್ರೀ ಎಸ್.ಎಸ್. ಪಾಟೀಲ್ (ಮುಂಡರಗಿ): ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಮುಂಡರಗಿ ಮತದಾರ ಕ್ಷೇತ್ರಕ್ಕೆ ಸೇರಿದ ಮುಂಡರಗಿ ಪಟ್ಟಣ ಪಂಚಾಯತ್ ಹಾಗೂ ಗದಗ ತಾಲ್ಲೂಕಿನ ಮುಳಗುಂದ ಪಟ್ಟಣ ಪಂಚಾಯತ್ ವ್ಯಾಪ್ತಿಯಲ್ಲಿ ನಿವೇಶನ ರಹಿತರ ಸಂಖ್ಯೆ ಎಷ್ಟು;

ಆ) ಅವರಿಗೆ ನಿವೇಶನ ಒದಗಿಸಲು ಸರ್ಕಾರ ಕೈಗೊಂಡ ಕ್ರಮಗಳೇನು;

ಇ) ಹೊಸದಾಗಿ ನಿವೇಶನ ಖರೀದಿ ಮಾಡಲು ಹಣಕಾಸಿನ ಅವಶ್ಯಕತೆ ಇದ್ದು ಹಣ ಬೇಡಿಕೆ ಪ್ರಕಾರ ಬಿಡುಗಡೆ ಆಗಿದೆಯೇ;

ಈ) ಬಿಡುಗಡೆ ಆಗದಿದ್ದರೆ ಯಾವಾಗ ಬಿಡುಗಡೆ ಮಾಡಲಾಗುವುದು?

ಶ್ರೀ ಡಿ.ಟಿ. ಜಯಕುಮಾರ್ (ವಸತಿ ಸಚಿವರು) :

ಅ) ಮುಂಡರಗಿ ಪಟ್ಟಣದಲ್ಲಿ 1132 ಮತ್ತು ಮುಳಗುಂದ ಪಟ್ಟಣದಲ್ಲಿ 725 ನಿವೇಶನ ರಹಿತರಿರುತ್ತಾರೆ.

ಆ) ಮುಂಡರಗಿ ಪಟ್ಟಣದಲ್ಲಿ ಈಗಾಗಲೇ 812 ಜನರಿಗೆ ನಿವೇಶನ ಒದಗಿಸಲಾಗಿದ್ದು ಇನ್ನುಳಿದ 320 ಜನರಿಗೆ ಬೇಕಾಗುವ 8ಎ–4ಗು ಜಮೀನು ಖರೀದಿಯ ಪ್ರಸ್ತಾವನೆಯು ಜಿಲ್ಲಾಧಿಕಾರಿಗಳ ಪರಿಶೀಲನೆಯಲ್ಲಿದೆ.

ಮುಳಗುಂದ ಪಟ್ಟಣದಲ್ಲಿ ಈಗಾಗಲೇ 500 ಜನರಿಗೆ ನಿವೇಶನ ಒದಗಿಸಲಾಗಿದ್ದು ಇನ್ನುಳಿದ 225 ಜನರಿಗೆ ಬೇಕಾಗುವ 8–00 ಎಕರೆ ಜಮೀನು ಖರೀದಿಯ ಪ್ರಸ್ತಾವನೆಯು ಜಿಲ್ಲಾಧಿಕಾರಿಗಳ ಪರಿಶೀಲನೆಯಲ್ಲಿದೆ.

ಇ) ಹೌದು.

ಈ) ಜಿಲ್ಲಾಧಿಕಾರಿಗಳು ಜಮೀನು ಖರೀದಿಗೆ ಪ್ರಸ್ತಾವನೆ ಸಲ್ಲಿಸಿದ ನಂತರ ಪರಿಶೀಲಿಸಿ ಕ್ರಮ ತೆಗೆದುಕೊಳ್ಳಲಾಗುವುದು.

64 (142) ಶ್ರೀ ಪ್ರಭಾಕರ ಬಂಗೇರ ಕೆ. (ಬೆಳ್ತಂಗಡಿ): ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿನ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಶಾಲೆಗಳಲ್ಲಿ ಯೋಗ ಮತ್ತು ನೈತಿಕ ಶಿಕ್ಷಣವನ್ನು ವಿದ್ಯಾರ್ಥಿಗಳಿಗೆ ಬೋಧಿಸುವ ಕುರಿತು ಸರ್ಕಾರ ಚಿಂತನೆ ನಡೆಸಿದೆಯೇ;

ಆ) ಹೌದಾದಲ್ಲಿ, ಆ ಕುರಿತಾದ ವಿವರಗಳೇನು;

ಇ) ವಿದ್ಯಾರ್ಥಿಗಳ ಶೈಕ್ಷಣಿಕ ಮುನ್ನಡೆಗೆ ಅನುವು ಮಾಡಿಕೊಡುವ ಯೋಗ ಮತ್ತು ನೈತಿಕೆ ಶಿಕ್ಷಣವನ್ನು ಜಾರಿಗೊಳಿಸಲು ಕಾಲನಿಗದಿ ಯೋಜನೆಯನ್ನು ರೂಪಿಸಿ ಅನುಷ್ಠಾನಗೊಳಿಸಲು ಸರ್ಕಾರ ಮುಂದಾಗುವುದೇ;

ಈ) ರಾಜ್ಯದಲ್ಲಿ ಪ್ರಕೃತಿ ಚಿಕಿತ್ಸೆ ಮತ್ತು ಯೋಗ ಶಿಕ್ಷಣ ನೀಡುವ ಮಾನ್ಯತೆ ಪಡೆದ ಎಷ್ಟು ಶಿಕ್ಷಣ ನೀಡುವ ಮಾನ್ಯತೆ ಪಡೆದ ಎಷ್ಟು ಶಿಕ್ಷಣಾಲಯಗಳು ಸರ್ಕಾರ ಮತ್ತು ಖಾಸಗಿ ವಲಯದಲ್ಲಿವೆ?

ಶ್ರೀ ಬಸವರಾಜ ಎಸ್. ಹೊರಟ್ಟಿ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು) :

ಅ) ಹೌದು.

ಆ) ತ್ರೈಮಾಸಿಕ ಪದ್ಧತಿಯಲ್ಲಿ 'ಬಿ' ಭಾಗದಲ್ಲಿ ಜೀವನ ವಿಜ್ಞಾನದಡಿಯಲ್ಲಿ ದೈಹಿಕ ಶಿಕ್ಷಣ, ಯೋಗ ಮತ್ತು ಆರೋಗ್ಯ ಶಿಕ್ಷಣಕ್ಕೆ 20 ಅಂಕಗಳನ್ನು ನಿಗಧಿಪಡಿಸಲಾಗಿದೆ.

ಇ) ಈಗಾಗಲೇ ಈ ಬಗ್ಗೆ ಕ್ರಮ ಕೈಗೊಳ್ಳಲಾಗಿದೆ.

ಈ) ಯೋಗ ಶಿಕ್ಷಣವನ್ನು ದೈಹಿಕ ಶಿಕ್ಷಣದ ಅಂಗವಾಗಿ ಬೋಧಿಸಲಾಗುತ್ತಿದೆ. ಶಿಕ್ಷಣ ಇಲಾಖೆಯ ಪ್ರಕೃತಿ ಚಿಕಿತ್ಸೆ ಶಿಕ್ಷಣ, ಯೋಗ ಶಿಕ್ಷಣ ಶಿಕ್ಷಣಾಲಯಗಳಿಗೆ ಪ್ರತ್ಯೇಕ ಮಾನ್ಯತೆ ನೀಡುತ್ತಿಲ್ಲ.